ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ದಿನಾಂಕ 17-3-1992ರ 16ನೇ ಪಟ್ಟಿಯಲ್ಲಿರುವ 72 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ 51 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸ್ವಾತಂತ್ರ್ಯ ಯೋಧರ ಪೆನ್‌ಶನ್‌ಗಾಗಿ ಬಂದ ಅರ್ಜಿಗಳ ಸಂಖ್ಯೆ

1256. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈವರೆಗೆ ಮಾಸಾಶನ ಕೇಳಿ ಸ್ವಾತಂತ್ರ್ಯ ಯೋಧರಿಂದ ಬಂದಿರುವ ಒಟ್ಟು ಅರ್ಜಿಗಳೆಷ್ಟು?

ಆ) ಆ ಪೈಕಿ ಈವರೆಗೆ ಎಷ್ಟು ಅರ್ಜಿಗಳನ್ನು ಮಂಜೂರು ಮಾಡಲಾಗಿದೆ ಹಾಗೂ ಎಷ್ಟು ಹಣ ಕೊಡಲಾಗಿದೆ?

ಇ) ಇನ್ನು ಎಷ್ಟು ಅರ್ಜಿಗಳು ಮಂಜೂರಾತಿಗೆ ಬಾಕಿ ಇದೆ?

ಈ) ಇವುಗಳನ್ನು ಯಾವಾಗ ಮಂಜೂರು ಮಾಡಲಾಗುವುದು; ಹಾಗೂ ಹಣ ಮಂಜೂರು ಮಾಡದೇ ಇರಲು ಕಾರಣಗಳೇನಾದರೂ ಇವೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ನೀಡುವ ಯೋಜನೆಯನ್ನು 1969ನೇ ಸಾಲಿನಿಂದ ಜಾರಿಗೆ ತಂದ ದಿನದಿಂದ ಇಲ್ಲಿಯವರೆಗೆ ಸುಮಾರು 33.043 ಮಂದಿ ಸದರಿ ಪಿಂಚಣಿ ಕೋರಿ ಅರ್ಜಿ ಸಲ್ಲಿಸಿದ್ದರು.

ಆ) ರಾಜ್ಯದಲ್ಲಿ 19.914 ಮಂದಿಗೆ ರಾಜ್ಯ ಗೌರವಧನ ಮಂಜೂರು ಮಾಡಲಾಗಿದೆ. ಪ್ರತಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರರಿಗೆ/ಅವಲಂಬಿತ ವಿಧವೆಯರಿಗೆ ಮಾಹೆಯಾನ ರೂ. 400-00 ರಂತೆ ಮಾಸಾಶನ ಕೊಡಲಾಗುತ್ತಿದೆ.

ಇ) 1800 ಅರ್ಜಿಗಳು ಬಾಕಿ ಇದೆ.

ಈ) ಅರ್ಜಿದಾರರಿಂದ ಸಂಪೂರ್ಣ ಮಾಹಿತಿ ಬರದೇ ಇರುವ ಕಾರಣ ಬಾಕಿ ಇರುವ ಈ ಅರ್ಜಿಗಳಲ್ಲಿ ಅರ್ಜಿದಾರರು ಸಂಪೂರ್ಣ ಮಾಹಿತಿ ಹಾಜರುಪಡಿಸಿದ ಕೂಡಲೇ ಈ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು.

1991ನೇ ಡಿಸೆಂಬರ್ ಕೊನೆಯವರೆಗೆ ಹೈಕೋರ್ಟಿನಲ್ಲಿ ಬಾಕಿ ಇರುವ ಪ್ರಕರಣಗಳು

1814. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಹೈಕೋರ್ಟಿನಲ್ಲಿ 1991ನೇ ಡಿಸೆಂಬರ್ ಕೊನೆಯವರೆಗೆ ತೀರ್ಮಾನವಾಗದೆ ಬಾಕಿ ಉಳಿದಿರುವ ಪ್ರಕರಣಗಳೆಷ್ಟು:

ಆ) ಈ ಬಾಕಿ ಉಳಿದ ಪ್ರಕರಣಗಳು ತೀರ್ಮಾನವಾಗಲು ಇನ್ನು ಎಷ್ಟು ಕಾಲ ಬೇಕಾಗುವುದು: ಈ ರೀತಿ ಬಾಕಿ ಉಳಿಯಲು ಇರುವ ಕಾರಣಗಳಾದರೂ ಏನು:

ಇ) ಬಾಕಿ ಉಳಿದ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದೇ: ಹಾಗಿದ್ದಲ್ಲಿ ಯಾವಾಗ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಉಚ್ಚ ನ್ಯಾಯಾಲಯವು ರಾಜ್ಯ ವಿಧಾನ ಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾಗೆ. ಆದುದರಿಂದ ಈ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ.

ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಇರುವ ಮೊಕದ್ದಮೆಗಳ ಸಂಖ್ಯೆ

1255. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಇಂದಿನವರೆಗೂ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳೆಷ್ಟು;

ಆ) ಇವುಗಳಲ್ಲಿ 3 ವರ್ಷಗಳಿಗಿಂತ ಹಿಂದಿನ ಮೊಕದ್ದಮೆಗಳೆಷ್ಟು;

ಇ) ಈ ಮೊಕದ್ದಮೆಗಳನ್ನು ಶೀಘ್ರ ವಿಲೇವಾರಿ ಮಾಡಲು ಸರಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೆ;

ಈ) ಹಾಗಿದ್ದರೆ. ಅದರ ವಿವರಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಉಚ್ಚ ನ್ಯಾಯಾಲಯವು ರಾಜ್ಯ ವಿಧಾನ ಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಈ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ.

ವಿದ್ಯಾ ಸಂಸ್ಥೆಗಳಿಗೆ ವೃತ್ತಿ ತೆರಿಗೆ ಹಾಕುವುದನ್ನು ನಿಲ್ಲಿಸುವ ಬಗ್ಗೆ

1735. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯಾ ಸಂಸ್ಥೆಗಳಿಗ ರೂ. 2500-00ಗಳ ವೃತ್ತಿ ತೆರಿಗೆ ವಿಧಿಸುತ್ತಿರುವುದನ್ನು ಸರ್ಕಾರ ನಿಲ್ಲಿಸುವುದೆ:

ಆ) ಹಾಗಿದ್ದರೆ. ಎಂದಿನಿಂದ ನಿಲ್ಲಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1992-93ರ ಆಯವ್ಯಯ ಭಾಷಣದಲ್ಲಿ ಹೇಳಿರುವಂತೆ ಕನ್ನಡ ಮಾಧ್ಯಮ ಶಾಲೆಗಳಿಗೆ. ಹಾಗೂ ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗ. ಹಿಂದುಳಿದ ಜಾತಿ ಅಥವಾ ಹಿಂದುಳಿದ ಪಂಗಡದ ಮಾಲೀಕರುಗಳು ನಡೆಸುವ ಶಾಲೆಗಳಿಗೆ 1-4-1992 ರಿಂದ ವೃತ್ತಿ ತೆರಿಗೆಯಿಂದ ವಿನಾಯಿತಿ ನೀಡಲು ಉದ್ದೇಶಿಸಲಾಗಿದೆ.